## ‘ಸಂಹಾರ’ದ ಹುಮ್ಮಸ್ಸಿನಲ್ಲಿ ಚಿರಂಜೀವಿ

ಚಿರಂಜೀವಿ ಸರ್ಜಾ ನಟನೆಯ ‘ಸಂಹಾರ’ ಈಗ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ (ಫೆ. 9ರಂದು ತೆರೆಗೆ). ಗುರು ದೇಶಪಾಂಡೆ ನಿರ್ದೇಶನದ ಈ ಸಿನಿಮಾ ಪ್ರೇಕ್ಷಕರಿಗೆ ಭರಪೂರ ಮನರಂಜನೆ ನೀಡಲಿದೆ ಎನ್ನುವುದು ಚಿತ್ರತಂಡದ ಭರವಸೆ.

ಹರಿಪ್ರಿಯಾ ಹಾಗೂ ಕಾವ್ಯಾ ಶೆಟ್ಟಿ ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದಾರೆ. ಹರಿಪ್ರಿಯಾ ಅವರದು ನೆಗೆಟಿವ್ ಶೇಡ್ ಪಾತ್ರವಂತೆ. ಇತ್ತೀಚಿನ ದಿನಗಳಲ್ಲಿ ಗ್ಲಾಮರ್‌ಗಿಂತಲೂ ಹೆಚ್ಚಾಗಿ ಅಭಿನಯದ ಗ್ರಾಮರ್ ಕಾರಣದಿಂದಾಗಿ ಗಮನ ಸೆಳೆಯುತ್ತಿರುವ ಹರಿಪ್ರಿಯಾ ಪಾಲಿಗೆ ‘ಸಂಹಾರ’ ಮತ್ತೊಂದು ನಿರೀಕ್ಷಿತ ಸಿನಿಮಾ. ಚಿತ್ರದ ಕಥೆಯೇನು ಹಾಗೂ ಅದರಲ್ಲಿ ಅವರ ಪಾತ್ರವೇನು ಎನ್ನುವುದನ್ನು ನಿರ್ದೇಶಕರು ಗುಟ್ಟಾಗಿಯೇ ಇರಿಸಿದ್ದಾರೆ.

‘ಸಂಹಾರ’ದ ಮೂಲಕ ಚಿರಂಜೀವಿ ವರ್ಚಸ್ಸು ಹೆಚ್ಚಲಿದೆ ಎನ್ನುವುದು ಗುರು ದೇಶಪಾಂಡೆ ಅವರ ವಿಶ್ವಾಸ. ಚಿತ್ರದ ಗೀತೆಗಳು ಈಗಾಗಲೇ ಬಿಡುಗಡೆಯಾಗಿವೆ. ಪುನೀತ್ ರಾಜಕುಮಾರ್ ಹಾಡಿರುವ ‘ಏನ್ ಅಚ್ಚರಿಯೋ ಹಾಡುತಿದೆ ಹೃದಯ’ ಎನ್ನುವ ಗೀತೆ ಚಿತ್ರದ ವಿಶೇಷಗಳಲ್ಲೊಂದು. ರವಿ ಬಸ್ರೂರ್ ಸಂಗೀತ ಚಿತ್ರಕ್ಕಿದೆ.

ಚಿರು ಸಿನಿಮಾ ತೆರೆ ಕಾಣುತ್ತಿರುವ ದಿನದಂದೇ ಅರ್ಜುನ್ ಸರ್ಜಾ ನಿರ್ದೇಶನದ ಹಾಗೂ ಅವರ ಪುತ್ರಿ ಐಶ್ವರ್ಯಾ ಅಭಿನಯದ ‘ಪ್ರೇಮಬರಹ’ ಚಿತ್ರವೂ ತೆರೆ ಕಾಣುತ್ತಿದೆ. ಒಂದೇ ಕುಟುಂಬದವರ ಎರಡು ಚಿತ್ರಗಳು ಏಕಕಾಲದಲ್ಲಿ ತೆರೆ ಕಾಣುತ್ತಿರುವುದು ಗಾಂಧಿನಗರದ ಪಾಲಿಗೆ ವಿಶೇಷ ಸಂಗತಿ.



## ಶ್ರಾವ್ಯಾಗಿದು ಕಲ್ಯಾಣದ ಕಾಲ



ಶ್ರಾವ್ಯಾ ನಟಿಸುವುದಿಲ್ಲ. ಅವರು ಭಾವನೆಗಳನ್ನು ಜೀವಿಸುತ್ತಾರೆ. ಇದು ನಿರ್ದೇಶಕ ರಾಜೇಂದ್ರ ಕಾರಂತ್ ಮೆಚ್ಚುಗೆ. ಕಾರಂತರ ನಿರ್ದೇಶನದಲ್ಲಿ ಶ್ರಾವ್ಯಾ ನಟಿಸಿರುವ ‘ನಂಜುಂಡಿ ಕಲ್ಯಾಣ’ ಈಗ ತೆರೆ ಕಾಣುವ ಸಿದ್ಧತೆ ನಡೆಸಿದೆ. ಕಳೆದ ವಾರವಷ್ಟೇ ಚಿತ್ರಗಳ ಗೀತೆಗಳ ಪ್ರದರ್ಶನದ ಮೂಲಕ ಚಿತ್ರತಂಡ ಸಿನಿಮಾದ ಪ್ರಚಾರಕ್ಕೆ ಚಾಲನೆ ನೀಡಿದೆ.

‘ನಂಜುಂಡಿ ಕಲ್ಯಾಣ’ (1989) ಕನ್ನಡ ಚಿತ್ರರಂಗದ ಬಹು ಯಶಸ್ವಿ ಚಿತ್ರಗಳಲ್ಲೊಂದು. ಹಳೆಯ ಶೀರ್ಷಿಕೆಯನ್ನು ಹೊಸ ಕಥೆಗೆ ನಿರ್ದೇಶಕರು ಬಳಸಿಕೊಂಡಿದ್ದಾರೆ. ಇದು ಕೂಡ ಹಾಸ್ಯದ ಹಳಿಯ ಮೇಲೆ ಓಡುವ ಕಥನ. ಹಟಮಾರಿ ತಾಯಿಯ ಮನಸ್ಸನ್ನು ಒಲಿಸಿಕೊಳ್ಳುವ ನಾಯಕ ಪ್ರೀತಿಸಿದ ಹುಡುಗಿಯನ್ನು ಹೇಗೆ ಮದುವೆಯಾಗುತ್ತಾನೆ ಎನ್ನುವುದು ಸಿನಿಮಾದ ಕಥೆ. ತಾಯಿಯ ಪಾತ್ರದಲ್ಲಿ ಪದ್ಮಜಾ ರಾವ್ ಕಾಣಿಸಿಕೊಂಡಿದ್ದಾರೆ.

ಮಧ್ಯಮ ವರ್ಗದ ಹುಡುಗಿಯ ಪಾತ್ರವನ್ನು ಶ್ರಾವ್ಯಾ ಚಿತ್ರದಲ್ಲಿ ಪೋಷಿಸಿದ್ದಾರೆ. ನಿರ್ದೇಶಕರು ತಮ್ಮ ಕೆಲಸವನ್ನು ಮೆಚ್ಚಿಕೊಂಡಿರುವುದು ನಟಿಯಾಗಿ ಅವರಿಗೆ ಖುಷಿ ಕೊಟ್ಟಿದೆ. ‘ಮಡಮಕ್ಕಿ’ ಚಿತ್ರದಲ್ಲಿ ನಟಿಸಿದ್ದ ತನುಷ್ ಈ ಚಿತ್ರದಲ್ಲಿ ಶ್ರಾವ್ಯಾಗೆ ಜೋಡಿಯಾಗಿ ನಟಿಸಿದ್ದಾರೆ. ತನುಷ್‌ಗೆ ಕೂಡ ಇದು ಬಹು ನಿರೀಕ್ಷೆಯ ಸಿನಿಮಾ. ‘ಮಡಮಕ್ಕಿ’ ಚಿತ್ರದ ಗಾಂಭೀರ್ಯ ಪ್ರೇಕ್ಷಕರ ಮನಸ್ಸು ಗೆಲ್ಲದ ಕಾರಣ, ಹಾಸ್ಯ ಕಥನದ ಮೂಲಕ ಗೆಲುವು ಸವಿಯುವ ಲೆಕ್ಕಾಚಾರ ಅವರದು.

ಇದರಲ್ಲಿ ವಿನೋದವಷ್ಟೇ ಅಲ್ಲ, ಮನಸ್ಸನ್ನು ತಾಕುವ ಭಾವನಾತ್ಮಕ ಪ್ರಸಂಗಗಳೂ ಸಾಕಷ್ಟಿವೆಯಂತೆ. ಪ್ರೇಕ್ಷಕರಿಗೆ ಕಚಗುಳಿ ಇಡುವ ಸಂಭಾಷಣೆ ಚಿತ್ರದಲ್ಲಿದ್ದರೂ, ಇಡೀ ಸಿನಿಮಾ ಎಲ್ಲಿಯೂ ಸಭ್ಯತೆಯ ಗಡಿ ದಾಟುವುದಿಲ್ಲ ಎಂದು ನಿರ್ದೇಶಕರು ಸ್ಪಷ್ಟವಾಗಿ ಹೇಳುತ್ತಾರೆ.